# ಟೋರ್ನ್, ರಿಪ್ಡ್ ಕಾಲವಯ್ಯಾ...

ಫ್ಯಾಷನ್ ಲೋಕದಲ್ಲಿ ಹರಿದ ಜೀನ್ಸ್‌ನ ದರ್ಬಾರು ಕಾಲಕಾಲಕ್ಕೆ ಮುನ್ನೆಲೆಗೆ ಬರುತ್ತಲೇ ಇರುತ್ತದೆ. ಫ್ಯಾಷನ್ ಟ್ರೆಂಡ್ ಕೂಡ ಆಗಿದೆ. ಇದಕ್ಕೆ ಕಾರಣ ರಿಪ್ಡ್, ಟೋರ್ನ್, ಡಿಸ್ಟ್ರೆಸ್ಡ್ ಜೀನ್ಸ್ ನೀಡುವ ವಿಶಿಷ್ಟ ಲುಕ್. ಗಮನ ಸೆಳೆವ ಗುಣವುಳ್ಳ ಜೀನ್ಸ್‌ನ ಈ ಮಾದರಿಗಳು ದುಬಾರಿಯೂ ಹೌದು.

■ ಜ್ಞಾನ ಚಿರಸ್ವಿ



ಪಾಶ್ಚಾತ್ಯ ಸಂಸ್ಕೃತಿಯ ಜೀನ್ಸ್ ಬಟ್ಟೆಗಳು ದೇಶ ದೇಶಗಳ ಗಡಿ ಮೀರಿ ಸದ್ಯ ಎಲ್ಲೆಡೆ ವಿಸ್ತಾರಗೊಂಡಿವೆ. ಜೀನ್ಸ್‌ನ ವಿಶೇಷ ಆಕರ್ಷಣೆಯು ಇದಕ್ಕೆ ಬಹುಮುಖ್ಯ ಕಾರಣವೆನ್ನಬಹುದು. ಸದ್ಯ ಎಲ್ಲ ವರ್ಗದವರ ಹಾಟ್ ಫೇವರೆಟ್ ಆಗಿರುವ ಜೀನ್ಸ್‌ನಲ್ಲಿ ಹಲವು ವೈವಿಧ್ಯಗಳಿವೆ. ಪ್ರಾರಂಭದಲ್ಲಿ ಕೇವಲ ಪ್ಯಾಂಟ್‌ಗಷ್ಟೇ ಸೀಮಿತಗೊಂಡಿದ್ದ ಜೀನ್ಸ್ ಕ್ರಮೇಣ ಶರ್ಟ್, ಶಾರ್ಟ್ಸ್, ಸ್ಕರ್ಟ್ಸ್ ಸೇರಿದಂತೆ ಹಲವು ರೀತಿಯಾಗಿಯೂ ಗಮನಸೆಳೆಯುತ್ತಿದೆ.

ಆದರೆ ಜೀನ್ಸ್ ಎಂದಾಕ್ಷಣ ಹೊಳೆಯುವುದೇ ಜೀನ್ಸ್ ಪ್ಯಾಂಟ್. ಯುವಕ–ಯುವತಿಯರ ಇಷ್ಟದ ಜೀನ್ಸ್ ಪ್ಯಾಂಟ್ ಈಗ ಹಲವು ಕವಲೊಡೆದು, ರಿಪ್ಡ್, ಟೋರ್ನ್ ಹಾಗೂ ಡಿಸ್ಟ್ರೆಸ್ಡ್ ಜೀನ್ಸ್ ಆಗಿಯೂ ಹೆಚ್ಚು ಜನಮನ್ನಣೆ ಗಳಿಸಿದೆ. ಅದರ ಪ್ರತಿಫಲವಾಗಿಯೇ, ಸಾಧಾರಣ ಜೀನ್ಸ್ ಪ್ಯಾಂಟ್ ಇರುತ್ತಿದ್ದ ಪ್ರತಿ ಫ್ಯಾಷನ್ ಪ್ರಿಯರ ಮನೆಯ ಕಪಾಟಿನಲ್ಲಿ ಸದ್ಯ ಟೋರ್ನ್, ರಿಪ್ಡ್, ಡಿಸ್ಟ್ರೆಸ್ಡ್‌ಗಳದ್ದೇ ದರ್ಬಾರು.

ಜೀನ್ಸ್ ಪ್ಯಾಂಟ್ ಪಾಶ್ಚಾತ್ಯ ಸಂಸ್ಕೃತಿಯದ್ದಾದರೂ ಹೆಚ್ಚು ಬಾಳಿಕೆ ಬರುವುದರಿಂದ, ಧರಿಸಲು ಅಷ್ಟೇ ಕಂಫರ್ಟ್ ಆಗಿರುವುದರಿಂದ ಎಲ್ಲೆಡೆಯೂ ಇದು ಗಟ್ಟಿಯಾಗಿ ನೆಲೆಯೂರಿದೆ. ನಮ್ಮಲ್ಲಿಯೂ ಇದು 'ನಮ್ಮದೇ' ಎನ್ನುವಷ್ಟರ ಮಟ್ಟಿಗೆ ಬೆರೆತು ಹೋಗಿದೆ. ವಿದೇಶದಲ್ಲಿ ಕಾರ್ಮಿಕರಿಗೆಂದು ರೂಪುಗೊಂಡ ಜೀನ್ಸ್ ಪ್ಯಾಂಟ್‌ಗಳೀಗ ಯುವಸಮೂಹದ ಫ್ಯಾಷನ್ ಹುಚ್ಚಿನಿಂದ ಬಟ್ಟೆಗಳ ಎವರ್‌ಗ್ರೀನ್ ಟ್ರೆಂಡ್ ಆಗಿದೆ.

ದೇಶಕ್ಕೆ ಕಾಲಿಟ್ಟ ಹಲವು ವರ್ಷಗಳವರೆಗೆ ಸಾಧಾರಣ ಪ್ಯಾಂಟ್‌ನಂತೆಯೇ ಕಾಣಿಸಿಕೊಳ್ಳುತ್ತಿದ್ದ ಜೀನ್ಸ್ ಕ್ರಮೇಣ ತನ್ನ ಮಗ್ಗಲು ಬದಲಿಸಿ ಮೊಣಕಾಲು, ತೊಡೆ ಭಾಗದಲ್ಲಿ ಹರಿದುಕೊಂಡು ಹಾಗೂ ಬಟ್ಟೆಯ ಮೇಲ್ಪದರವನ್ನಷ್ಟೇ ಕತ್ತರಿಸಿಕೊಂಡು ವಿಭಿನ್ನ ವಿನ್ಯಾಸದಲ್ಲಿ ಮಾರುಕಟ್ಟೆಗೆ ಕಾಲಿಡತೊಡಗಿತು. ಅಷ್ಟಕ್ಕೆ ದಂಗುಬಡಿದಂತಾಗಿದ್ದ ಫ್ಯಾಷನ್ ಪೂರ್ವಗ್ರಹಪೀಡಿತರು ಬೊಬ್ಬೆ ಹೊಡೆದ್ದದ್ದೂ ಉಂಟು. ಆದರೆ, ಅದಕ್ಕೆ ಡೋಂಟ್‌ಕೇರ್ ಎಂದ ಯುವಕ–ಯುವತಿಯರು ವಿರೋಧದ ನಡುವೆಯೂ ಹರಿದ ಜೀನ್ಸ್ ತೊಟ್ಟು ಸಂಭ್ರಮಿಸಿದರು.

ಹರಿದ ಜೀನ್ಸ್‌ನ ಪ್ರಮಾಣ ದಿನಗಳೆದಂತೆಲ್ಲ ಹೆಚ್ಚುತ್ತಲೇ ಸಾಗಿ ಸದ್ಯ ಪ್ಯಾಂಟ್‌ನ ಮುಕ್ಕಾಲು ಭಾಗವನ್ನೇ ಕತ್ತರಿಸಿಕೊಂಡು ಮುಚ್ಚಿಕೊಳ್ಳುವುದನ್ನಷ್ಟೇ ಮುಚ್ಚಿಕೊಂಡು ಉಳಿದದ್ದನ್ನು ತೋರಿಸುವ ಉಮೇದಿಗೆ ಬಿದ್ದಂತಿದೆ ಫ್ಯಾಷನ್ ಲೋಕ ಮತ್ತು ನಮ್ಮ ಯುವಸಮೂಹ. ಈ ನಿಟ್ಟಿನಲ್ಲಿ ಮುಂದಿರುವುದು ನಗರ ಪ್ರದೇಶದ ಯುವಸಮೂಹವೆಂದರೂ ತಪ್ಪಾಗದು. ಈ ಹರಿದ ಜೀನ್ಸ್‌ನ ವೈವಿಧ್ಯವನ್ನು ನೋಡುವುದಾದರೆ...

## ರಿಪ್ಡ್ ಜೀನ್ಸ್

ತೊಡೆ, ಮೊಣಕಾಲು ಸೇರಿದಂತೆ ಪ್ಯಾಂಟ್‌ನ ಕೆಲವೆಡೆಯಷ್ಟೇ ತೂತಾಗಿರುವಂತೆ, ಹರಿದುಕೊಂಡಿರುವಂತೆ ರೂಪುಗೊಂಡ ಪ್ಯಾಂಟ್‌ಗಳನ್ನು ರಿಪ್ಡ್ ಜೀನ್ಸ್ ಎನ್ನಲಾಗುತ್ತದೆ. ಪ್ಯಾಂಟ್‌ನ ಇಂಥದ್ದೇ ಜಾಗದಲ್ಲಿ ರಂಧ್ರಗಳಿರಬೇಕೆಂಬ ನಿಯಮಗಳೇನೂ ಇಲ್ಲ. 1980ರಲ್ಲಿ ಜಗತ್ತಿನಾದ್ಯಂತ ಈ ಮಾದರಿಯ ಪ್ಯಾಂಟ್‌ಗಳು ಟ್ರೆಂಡ್ ಸೃಷ್ಟಿಸಿದ್ದವು. ಈಗಲೂ